ರಾಜೀವ್ ಚಂದ್ರಶೇಖರ್:

ಹಿನ್ನೆಲೆ

ರಾಜೀವ್ ಚಂದ್ರಶೇಖರ್ ರವರು 2012ರಲ್ಲಿ , ಕರ್ನಾಟಕ ಮತ್ತು ಬೆಂಗಳೂರನ್ನು ಪ್ರತಿನಿಧಿಸುತ್ತ ತಮ್ಮ ಎರಡನೇ ಅವಧಿಗೆ ಸ್ವತಂತ್ರ ಅಭ್ಯರ್ಥಿಯಾಗಿ ರಾಜ್ಯಸಭೆಗೆ  ಚುನಾಯಿತರಾದರು. ಅವರು ಎನ್ ಡಿಎ ಮೈತ್ರಿಕೂಟವನ್ನು ಬೆಂಬಲಿಸುತ್ತಾರೆ ಮತ್ತು ಅದರ ಭಾಗವಾಗಿದ್ದಾರೆ. 2006ರಿಂದ 2014ರವರೆಗೆ ಕೇಂದ್ರದಲ್ಲಿ ಅವರು ವಿರೋಧ ಪಕ್ಷದ ಭಾಗವಾಗಿದ್ದರು.

ರಾಜೀವ್ ಅವರು ಸುಮಾರು 40 ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಾರೆ. ಯಲಹಂಕ ವಾಯು ನೆಲೆಯಲ್ಲಿ ಮತ್ತು ಹೆಬ್ಬಾಳದ ತರಬೇತಿ ಕೇಂದ್ರದಲ್ಲಿ ಸೇವೆ ಸಲ್ಲುಸುತ್ತಿದ್ದ ವಾಯುಸೇನೆಯ ಅಧಿಕಾರಿಯ ಮಗನಾಗಿ ತಮ್ಮ ಬಾಲ್ಯವನ್ನು ಬೆಂಗಳೂರಿನಲ್ಲೇ ಕಳೆದಿದ್ದಾರೆ. ಯಲಹಂಕ ಮತ್ತು ಹೆಬ್ಬಾಳದ ಕೇಂದ್ರೀಯ ವಿದ್ಯಾಲಯಗಳಲ್ಲಿ ಓದುತ್ತಿದ್ದ ಬಾಲಕನಾಗಿ ಅನೇಕ ಬಾರಿ ಹೆಬ್ಬಾಳದ ಶಾಲೆಯಿಂದ ಯಲಹಂಕದಲ್ಲಿದ್ದ ಮನೆಯವರೆಗೆ ಕಾಲ್ನಡಿಗೆಯಲ್ಲೇ ಹೋಗುತ್ತಿದ್ದರು.

ನಂತರ ಅವರು, ಆಗ ಮಂಗಳೂರು ವಿಶ್ವವಿದ್ಯಾನಿಲಯದ ಭಾಗವಾಗಿದ್ದ ಮಣಿಪಾಲದ ಎಂಐಟಿ ಕಾಲೇಜಿನಲ್ಲಿ ಇಂಜಿನೀರಿಂಗ್ ಪದವಿ ಪಡೆದರು. ತದನಂತರ ಅಮೆರಿಕಾದ ಚಿಕಾಗೋದಲ್ಲಿನ ಇಲಿನಾಯ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಗಣಕ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಮುಂದೆ ಅವರು ಸಿಲಿಕಾನ್ ವ್ಯಾಲಿಯಲ್ಲಿ ತಂತ್ರಾಂಶ ಮತ್ತು ಮೈಕ್ರೊಪ್ರೊಸೆಸರ್ ಕ್ಷೇತ್ರದಲ್ಲಿ ವೃತ್ತಿಜೀವನ ಅರಿಸುತ್ತಾ ಪ್ರಸಿದ್ಧ ಇಂಟೆಲ್ ಕಂಪನಿಯಲ್ಲಿ ಕಾರ್ಯನಿರ್ವಹಿಸಿದರು. ಐತಿಹಾಸಿಕ 80486 ಪ್ರೊಸೆಸ್ಸರ್ ಮತ್ತು ಪೆಂಟಿಯಂ ನಿರ್ಮಿಸಿದ ತಂಡದ ಭಾಗವಾಗಿದ್ದರು.

1992ರಲ್ಲಿ ಅವರು ಭಾರತಕ್ಕೆ ಹಿಂತಿರುಗಿದರು ಮತ್ತು ಅಂದಿನಿಂದ ಇಂದಿನವರೆಗೆ ಬೆಂಗಳೂರಿನಲ್ಲೇ ತಮ್ಮ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ನೆಲೆಸಿದ್ದಾರೆ. ಅವರ ತಂದೆ-ತಾಯಿ ಹಾಗು ಸಹೋದರಿಯ ಕುಟುಂಬ ಸದಸ್ಯರೂ ಸಹ ಬೆಂಗಳೂರಿನಲ್ಲೇ ನೆಲೆಸಿದ್ದಾರೆ.

ಉದ್ಯಮಿಯಾಗಿ ರಾಜೀವ್

1990ರ ದಶಕದ ಆರಂಭದಲ್ಲಿ ಭಾರತಕ್ಕೆ ಹಿಂತಿರುಗಿದ ರಾಜೀವ್ ರವರು ಭಾರತದ ಅತ್ಯಂತ ದೊಡ್ಡ ಮತ್ತು ಮೊದಲನೆ ಸೆಲ್ಯೂಲಾರ್ ಕಂಪೆನಿ, ಬಿಪಿಎಲ್ ಮೊಬೈಲ್ ಅನ್ನು 1994ರಲ್ಲಿ ಆರಂಭಿಸಿದರು. ಆಗ ಅವರ ವಯಸ್ಸು ಕೇವಲ 30.

ಮಾಜಿ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿರವರ ವಾಣಿಜ್ಯ ಮತ್ತು ಉದ್ಯಮ ಮಂಡಳಿಯ ಯುವ ಸದಸ್ಯರಲ್ಲಿ ಒಬ್ಬರಾಗಿದ್ದರು.

ಅವರು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘಗಳ ಒಕ್ಕೂಟದ (ಎಫ್    ಐಸಿಸಿಐ- ಫಿಕ್ಕಿ) ಅತ್ಯಂತ ಕಿರಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಫಿಕ್ಕಿ ಅಧ್ಯಕ್ಷರಾಗಿ ಅವರು, 26/11ರ ನಂತರ ಭಯೋತ್ಪಾದನೆ, ವಿಷಯದ ಕುರಿತು ಒಂದು ಮುನ್ನೋಟ ವರದಿಯನ್ನು ಸಿದ್ಧಪಡಿಸಿದ್ದರು. ಆ ವರದಿಯಲ್ಲಿ ಪ್ರಸ್ತಾಪಿಸಿದ್ದಂತಹ ನ್ಯಾಟ್ ಗ್ರಿಡ್ ರೀತಿಯ ಅನೇಕ ಸಲಹೆಗಳನ್ನು ಜಾರಿಗೊಳಿಸಲಾಗಿದೆ.

ಅವರು ತಮ್ಮ ಜುಪಿಟರ್ ಕ್ಯಾಪಿಟಲ್ ಸಂಸ್ಥೆಯ ಮೂಲಕ ಮಾಡಿರುವ ಹಲವಾರು ಹೂಡಿಕೆಗಳಲ್ಲಿ ಸುವರ್ಣ ನ್ಯೂಸ್, ಕನ್ನಡ ಪ್ರಭ, ರಿಪಬ್ಲಿಕ್ ಟಿವಿ ಮತ್ತು ಅವುಗಳ ಡಿಜಿಟಲ್ ಆವೃತ್ತಿಗಳು ಸಹ ಕೂಡಿವೆ. ಅವರು ಇನ್ನೂ ಹಲವಾರು ತಂತ್ರಜ್ಞಾನ ಮತ್ತು ಮಾಧ್ಯಮ ಸ್ಟಾರ್ಟ್ ಅಪ್ ಗಳಲ್ಲಿ , ಬೆಂಗಳೂರಿನಲ್ಲಿ ಮತ್ತು ಹೊರಗೆ, ಹೂಡಿಕೆ ಮಾಡಿದ್ದಾರೆ. ಕರ್ನಾಟಕದಾದ್ಯಂತ ಯುವ ಉದ್ಯಮಿಗಳು ಅವರನ್ನು ಗೌರವದಿಂದ ಕಾಣುತ್ತಾರೆ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ. ಅವರು ವ್ಯಾಸಂಗ ಮಾಡಿದ ಚಿಕಾಗೋದ ಇಲಿನಾಯ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ ಮತ್ತು ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ (ಮೈಕ್ರೋ ಸಾಫ್ಟ್ ಸಿಇಒ ಸತ್ಯ ನಡೆಲ್ಲಾ ಜೊತೆಗೆ) ವಿಶೇಷ ಪ್ರಶಸ್ತಿ ನೀಡಿ ಗೌರವಿಸಿದೆ.

ರಾಜೀವ್ ಮತ್ತು ರಾಜಕಾರಣ

ರಾಜೀವ್ ಅವರು 1990ರ ದಶಕದ ಮಧ್ಯ ಭಾಗದಿಂದ ಬಿಜೆಪಿಯೊಂದಿಗೆ ಒಡನಾಟ ಹೊಂದಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಮತ್ತು ಕರ್ನಾಟಕದಲ್ಲಿ ಹಲವಾರು ಚುನಾವಣೆಗಳಲ್ಲಿ  ಬಿಜೆಪಿಯನ್ನು ಬೆಂಬಲಿಸಿದ್ದಾರೆ ಮತ್ತು ಪಕ್ಷಕ್ಕಾಗಿ ಕೆಲಸ ಮಾಡಿದ್ದಾರೆ. 1999ರಿಂದ ಕರ್ನಾಟಕದ ಮತ್ತು ಬಿಬಿಎಂಪಿಯ ಪ್ರತಿಯೊಂದು ಚುನಾವಣೆಯಲ್ಲೂ ಕಾರ್ಯ ನಿರ್ವಹಿಸಿದ್ದಾರೆ.

ಸಂಸದರಾಗಿ, ರಾಜೀವ್ ರವರು ನಿರಂತರವಾಗಿ ಕೆಲಸ ಮಾಡಿದ್ದಾರೆ. ಬೆಂಗಳೂರು ಮತ್ತು ಬೆಂಗಳೂರಿನ ನಾಗರೀಕರ ಹಿತಾಸಕ್ತಿ ಕಾಪಾಡುವುದು, ನಗರಾಡಳಿತ, ಡಿಜಿಟಲ್ ಇಂಡಿಯಾ, ಅಂತರ್ಜಾಲ ಮತ್ತು ತಂತ್ರಜ್ಞಾನ ನೀತಿ, ಆಡಳಿತ ಮತ್ತು ಆರ್ಥಿಕ ಸುಧಾರಣೆಗಳ ಮೂಲಕ ಭಾರತವನ್ನು ಪರಿವರ್ತಿಸುವುದು, ನಿವೃತ್ತ ಮತ್ತು ಸೇವಾನಿರತ ಯೋಧರ ಕಲ್ಯಾಣ, ಮಕ್ಕಳ ರಕ್ಷಣೆ ಮೊದಲಾದ ವಿಷಯಗಳ ಬಗ್ಗೆ ಅತೀವ ಕಾಳಜಿ ಹೊಂದಿದ್ದಾರೆ.

ತಂತ್ರಜ್ಞಾನ, ಉದ್ಯಮಶೀಲತೆ, ಹಣಕಾಸು ಮತ್ತು ಆರ್ಥಿಕ ವಿಷಯಗಳಲ್ಲಿ ಅತ್ಯಂತ ತಿಳಿವಳಿಕೆ ಮತ್ತು ಅನುಭವವುಳ್ಳ ಸಂಸದರಾಗಿ ಅವರು ಅನೇಕ ಸಂಸದೀಯ ಮತ್ತು ಸರ್ಕಾರದ ಸಮಿತಿಗಳಿಗೆ ನೇಮಕಗೊಂಡಿದ್ದಾರೆ. ರಕ್ಷಣಾ, ಹಣಕಾಸು, ಟೆಲಿಕಾಂ, ನಗರಾಭಿವೃದ್ಧಿ, ಜಿಎಸ್ ಟಿ, ರೇರಾ ಕಾಯ್ದೆ, ಕಲ್ಲಿದ್ದಲು, ಎನ್ ಸಿಸಿ ಸಲಹಾ ಮಂಡಳಿ ಸೇರಿದಂತೆ ಹಲವಾರು ಸ್ಥಾಯಿ ಮತ್ತು ಇತರೆ ಸಂಸದೀಯ ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಸಂಸದರಾಗುವ ಮುನ್ನ ರಾಜೀವ್ ರವರು ಪ್ರಧಾನನಾಂತ್ರಿಗಳ ವಾಣಿಜ್ಯ ಮತ್ತು ಉದ್ಯಮ ಮಂಡಳಿಯ ಸದಸ್ಯರಾಗಿ, ಕರ್ನಾಟಕ ಸರ್ಕಾರದ ಮೂಲಸೌಕರ್ಯ ಕಾರ್ಯಪಡೆಯ ಅಧ್ಯಕ್ಷರಾಗಿ, ಐಟಿ ಸಂಸದೀಯ ಸ್ಥಾಯಿ ಸಮಿತಿಯ ಸದಸ್ಯರಾಗಿ ಮತ್ತು ಪಾರ್ಲಿಮೆಂಟರಿ ಫೋರಂ ಫಾರ್ ಯೂಥ್ ನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ಮತ್ತು ಬೆಂಗಳೂರಿಗಾಗಿ ರಾಜೀವ್

2009ರಲ್ಲಿ ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಪ್ರವಾಹದಿಂದ ಮನೆ ಕಳೆದುಕೊಂಡಿದ್ದವರಿಗೆ ಪುನರ್ವಸತಿ ಕಲ್ಪಿಸಲು ಯಡಿಯೂರಪ್ಪನವರ ಸರ್ಕಾರ ಹಮ್ಮಿಕೊಂಡಿದ್ದ "ಆಶ್ರಯ" ಯೋಜನೆಯನ್ನು ಯಶಸ್ವಿಗೊಳಿಸಲು ರಾಜೀವ್ ರವರು ಸಹಕರಿಸಿದರು. ಸಿಸ್ಕೋ, ಇನ್ಫೋಸಿಸ್, ವಿಪ್ರೋ ಮುಂತಾದ ಕಂಪನಿಗಳನ್ನು ಒಗ್ಗೂಡಿಸಿ ನೆರೆಪೀಡಿತರಿಗೆ ಸುಮಾರು 40,000 ಮನೆಗಳನ್ನು ನಿರ್ಮಿಸುವ ಅಭೂತಪೂರ್ವ ಕಾರ್ಯ ಕೈಗೊಂಡರು.

ತಮ್ಮ ಆರ್ ಸಿ ಪ್ರತಿಷ್ಠಾನದ ಮೂಲಕ ಬಾಗಲಕೋಟೆ ಜಿಲ್ಲೆಯ ಶಿರಬಡಗಿ ಗ್ರಾಮದಲ್ಲಿ 293ಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಿ ಕೊಟ್ಟರು.

ರಾಷ್ಟ್ರೀಯ ಸೇನಾ ಸ್ಮಾರಕ - ಬೆಂಗಳೂರಿನಲ್ಲಿರುವ ಸ್ವತಂತ್ರ ಭಾರತದ ಪ್ರಪ್ರಥಮ ಸೇನಾ ಸ್ಮಾರಕ ರಾಜೀವ್ ಅವರ ಕನಸಿನ ಕುಡಿ ಮತ್ತು ಇದು ಯಡಿಯೂರಪ್ಪ ನವರ ಸರ್ಕಾರದ ಅವಧಿಯಲ್ಲಿ ಪ್ರಾರಂಭಗೊಂಡಿತು. ಇದು ಕಾರ್ಯಾರಂಭಗೊಂಡಾಗಿನಿಂದಲೂ ರಾಜೀವ್ ಅವರು ಅಲ್ಲಿನ 210 ಅಡಿ ಧ್ವಜಸ್ತಂಭದ ಮೇಲೆ ಸದಾ ಹಾರಾಡುವ ರಾಷ್ಟ್ರಧ್ವಜವನ್ನು ಕಾಣಿಕೆಯಾಗಿ ನೀಡುತ್ತಾ ಬಂದಿದ್ದಾರೆ. (ಪ್ರತಿ ಧ್ವಜದ ಬೆಲೆ ಸುಮಾರು 55 ಸಾವಿರ ರೂಪಾಯಿ ಮತ್ತು ಅದನ್ನು ಆಗ್ಗಾಗ್ಗೆ ಬದಲಾಯಿಸಬೇಕಾಗುತ್ತದೆ)

ಬೆಂಗಳೂರಿನ ಜೊತೆ ರಾಜೀವ್ ಚಂದ್ರಶೇಖರ್ ರವರ ಒಡನಾಟ ಒಬ್ಬ ಜನಪ್ರತಿನಿಧಿಗಿಂತ ಮಿಗಿಲಾದುದು. ಈ ನಗರ ಮೂರು ದಶಕಗಳಿಂದ ಅವರ ಮನೆಯಾಗಿದೆ. ಕಳೆದ ಹಲವಾರು ವರ್ಷಗಳಿಂದ ಜನಸಾಮಾನ್ಯರ ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದಿಸುವ ದನಿಯಾಗಿದ್ದಾರೆ. ಸರ್ಕಾರದಿಂದ ತೊಂದರೆಗೆ ಒಳಪಟ್ಟಿರುವ ನಿವಾಸಿ ಕಲ್ಯಾಣ ಸಂಘಗಳು ಮತ್ತು ನಾಗರೀಕರ ಅಳಲು ಕೇಳಲು ಸದಾ ಲಭ್ಯರಿರುತ್ತಾರೆ.

ಯೋಜನಾ ಬದ್ಧ ಅಭಿವೃದ್ಧಿಯ ಮೂಲಕ ಬೆಂಗಳೂರಿನ ಆಡಳಿತದಲ್ಲಿ ಸುಧಾರಣೆ ತರಬೇಕೆಂಬ ಬಲವಾದ ಅಭಿಪ್ರಾಯ ಹೊಂದಿರುವ ರಾಜೀವ್ ರವರು, ನಗರಾಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಹೋರಾಡಿದ್ದಾರೆ ಮತ್ತು ಭ್ರಷ್ಟಾಚಾರವನ್ನು ವಿರೋಧಿಸಿದ್ದಾರೆ.

ಬೆಂಗಳೂರನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ಹಿಂಪಡೆಯಲು, ಭ್ರಷ್ಟಾಚಾರ ತೊಲಗಿಸಲು, ಸರ್ಕಾರದ ಕಾರ್ಯಕಲಾಪಗಳಲ್ಲಿ ಪಾರದರ್ಶಕತೆ ತರಲು, ರಾಜೀವ್ ರವರು ನಾಗರೀಕರ ಸಹಯೋಗದೊಂದಿಗೆ ಹಲವಾರು ಹೋರಾಟಗಳನ್ನು ನಡೆಸಿದ್ದಾರೆ ಮತ್ತು ನಾಗರೀಕರ ಕೈ ಬಲಪಡಿಸಿದ್ದಾರೆ.

ಯಡಿಯೂರಪ್ಪನವರ ಸರ್ಕಾರದ ಅವಧಿಯಲ್ಲಿ ಪ್ಲಾನ್ ಬೆಂಗಳೂರು 2020 ಸಿದ್ಧಪಡಿಸಿದ್ದ ಅಬೈಡ್ ನ ಸಂಚಾಲಕರಾಗಿ ಹಲವಾರು ಸಾರ್ವಜನಿಕ ಸಮಾಲೋಚನೆಗಳನ್ನು ನಡೆಸಿದ್ದರು ಮತ್ತು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಒಂದು ಹೊಸ ಕರಡು ಮಸೂದೆಯನ್ನೂ ಸಿದ್ಧಪಡಿಸಿದ್ದರು. ಪ್ರಸ್ತುತ ಸಿದ್ದರಾಮಯ್ಯ ಅವರ ಸರ್ಕಾರ 2025ಕ್ಕೆ ವಿಷನ್ ಡಾಕ್ಯುಮೆಂಟ್ ಮಾಡಲು ರೂ.5.96 ಕೋಟಿ ಖರ್ಚು ಮಾಡುತ್ತಿದೆ. ಆದರೆ, 2010ರಲ್ಲಿ, ಅಬೈಡ್ ಕಾರ್ಯಪಡೆಯ ಸಂಚಾಲಕರಾಗಿ ರಾಜೀವ್ ರವರು ಪಿಬಿ2020 ಯನ್ನು ಸಂಪೂರ್ಣವಾಗಿ ತಮ್ಮ ಖರ್ಚಿನಲ್ಲೇ ಸಿದ್ಧಪಡಿಸಿದ್ದರು.

ಅವರ ಸಕ್ರಿಯ ಭಾಗವಹಿಸುವಿಕೆ ಮತ್ತು ಬೆಂಬಲದಿಂದ ಸ್ಟೀಲ್ ಫ್ಲೈಓವರ್ ಬೇಡ ಚಳುವಳಿ ರಾಜ್ಯ ಸರ್ಕಾರ ಭ್ರಷ್ಟ

ಯೋಜನೆಯನ್ನು ಕೈಬಿಡುವಂತೆ ಮಾಡಿತ್ತು.

ಪ್ರಸ್ತುತ ಸರ್ಕಾರ ಮುನ್ನೆಲೆಗೆ ತರಲು ಪ್ರಯತ್ನಿಸುತ್ತಿರುವ ಮಾಸ್ಟರ್ ಪ್ಲಾನ್ 2031ನ್ನು ರಾಜೀವ್ ಅವರು ವಿರೋಧಿಸಿದ್ದಾರೆ ಮತ್ತು ತಮ್ಮ ಬಹುಕಾಲದ ಬೇಡಿಕೆಯಾದ ಮಲ್ಟಿ ಇಯರ್ ಡೆವಲಪ್ಮೆಂಟ್ ಪ್ಲಾನ್ ಗಾಗಿ ಒತ್ತಾಯಿಸಿದ್ದಾರೆ. ಮಾಸ್ಟರ್ ಪ್ಲಾನ್ 2031ನ್ನು ಮರುಪರಿಶೀಲಿಸಬೇಕೆಂದು ತಮ್ಮ ಆಕ್ಷೇಪಣೆ ಮತ್ತು ಸಲಹೆಗಳನ್ನು ಸಲ್ಲಿಸಿದ್ದಾರೆ.

ಬೆಂಗಳೂರಿನ ಕೆರೆಗಳನ್ನು ರಕ್ಷಿಸುವ ಮತ್ತು ಆ ಮೂಲಕ ನಗರದ ಭವಿಷ್ಯವನ್ನು ಉಳಿಸುವ ಹೋರಾಟಕ್ಕೆ ರಾಜೀವ್ ರವರು ನೇತೃತ್ವ ವಹಿಸಿದ್ದಾರೆ. ನಗರದಾದ್ಯಂತ ಕೆರೆಗಳ ಅಂಗಳಗಳಲ್ಲಿ ಸುಮಾರು 17000 ಸಸಿಗಳನ್ನು ನೆಟ್ಟಿದ್ದಾರೆ.

ಶಾಲೆಗಳ ಮತ್ತು ಮನೆಗಳ ಸಮೀಪ ಬಾರ್ ಗಳನ್ನು ವಿರೋಧಿಸುವುದು ಸೇರಿದಂತೆ ಜನವಸತಿ ಪ್ರದೇಶಗಳ ವಾಣಿಜ್ಯೀಕರಣದ ವಿರುದ್ಧ ಹೋರಾಡಿದ್ದಾರೆ.

ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಬಾರ್ ಗಳಲ್ಲಿ ಮದ್ಯ ದೊರಕುವುದರ ವಿರುದ್ಧ ಹೋರಾಡಿದ್ದಾರೆ

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಮತ್ತು ನ್ಯಾಯಾಲಯದ ಮಧ್ಯಸ್ಥಿಕೆ ಮೂಲಕ ಸಿದ್ದರಾಮಯ್ಯ ಸರ್ಕಾರದ ಅನೇಕ ಜನವಿರೋಧಿ ನೀತಿಗಳಿಗೆ ಸವಾಲೆಸೆದಿದ್ದಾರೆ ಮತ್ತು ತಡೆಯೊಡ್ಡಿದ್ದಾರೆ. ರಾಜೀವ್ ಅವರು ಭ್ರಷ್ಟಾಚಾರ ವಿರೋಧಿ ನಾಯಕ ಎಂದು ಜನಪ್ರಿಯವಾಗಿದ್ದಾರೆ.

ಚಿತ್ರೀಕರಣದ ವೇಳೆ ಆಕಸ್ಮಿಕ ಮರಣವನ್ನಪ್ಪಿದ ಕಲಾವಿದರಿಂದ ಹಿಡಿದು ಕರ್ನಾಟಕದ ಹಲವಾರು ಬಡ ಕುಟುಂಬಗಳಿಗೆ ಕೋಟ್ಯಂತರ ರೂಪಾಯಿಗಳ ಧನಸಹಾಯ ಮಾಡಿದ್ದಾರೆ.

ಬಿಬಿಎಂಪಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಒದಗಿಸಿದ್ದಾರೆ.

ಕಿಡ್ನಿ ಕಸಿ ಮಾಡುವ ಹಗರಣ ಬಯಲಿಗೆಳೆದ ಪೊಲೀಸರನ್ನು ಪುರಸ್ಕರಿಸಿದ್ದಾರೆ.

ಅವರು, ಬೆಂಗಳೂರಿಗೆ ಸಂಬಂಧಿಸಿದ ವಿಷಯಗಳ ಕುರಿತು ಮುಂಚೂಣಿಯಲ್ಲಿರುವ ಎನ್ ಜಿಒ, ನಮ್ಮ ಬೆಂಗಳೂರು ಪ್ರತಿಷ್ಠಾನದ ಸ್ಥಾಪಕರಾಗಿದ್ದಾರೆ. ಬೆಂಗಳೂರಿಗಾಗಿ ಕೆಲಸ ಮಾಡುವ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು, ಎನ್ ಜಿಒ ಗಳನ್ನು ಗುರುತಿಸುವ ವಾರ್ಷಿಕ ನಮ್ಮ ಬೆಂಗಳೂರು ಪ್ರಶಸ್ತಿಗಳು ಇಂದು ಪ್ರತಿಷ್ಠಾತ್ಮಕವೆಂದು ಪರಿಗಣಿಸಲಾಗುತ್ತದೆ. 2009 ರಿಂದೀಚೆಗೆ, ಎಲೆಮರೆಯ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದ ಅನೇಕ ವ್ಯಕ್ತಿಗಳು ಮತ್ತು ಸಂಘ-ಸಂಸ್ಥೆಗಳು ಎನ್ ಬಿಎಫ್ ನಿಂದ ಗುರುತಿಸಲ್ಪಟ್ಟಿದ್ದಾರೆ ಮತ್ತು ಬೆಂಬಲಿಸಲ್ಪಟ್ಟಿದ್ದಾರೆ.

ಅವರು ಫ್ಲ್ಯಾಗ್ಸ್ ಆಫ್ ಹಾನರ್ ಪ್ರತಿಷ್ಠಾನದ ಸ್ಥಾಪಕರಾಗಿದ್ದಾರೆ. ಈ ಪ್ರತಿಷ್ಠಾನ ಯೋಧರ ಕುಟುಂಬಗಳ ಬಗ್ಗೆ ಕಾಳಜಿ

ವಹಿಸುತ್ತದೆ, ಅದರಲ್ಲೂ ಮುಖ್ಯವಾಗಿ ದೇಶ ಸೇವೆಯಲ್ಲಿ ಹುತಾತ್ಮರಾದವರ ಕುಟುಂಬಗಳಿಗೆ ಸಹಾಯ ಒದಗಿಸುತ್ತದೆ. ಕರ್ನಾಟಕದ ಹಲವಾರು ಕುಟುಂಬಗಳಿಗೆ ಎಫ್ ಒಎಚ್ ಸೇವೆ ಸಲ್ಲಿಸಿದೆ.

ಅವರು ನ್ಯಾಷನಲ್ ಕೋಅಲಿಯೇಷನ್ ಟು ಪ್ರೊಟೆಕ್ಟ್ ಅವರ್ ಚಿಲ್ಡ್ರನ್ (ಎನ್ ಸಿಪಿಒಸಿ) ಎಂಬ ಒಕ್ಕೂಟವನ್ನು ಸ್ಥಾಪಿಸಿದ್ದಾರೆ. ಎನ್ ಜಿಒ ಗಳ ಈ ಒಕ್ಕೂಟ ಮಕ್ಕಳ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯದ ಬಗ್ಗೆ ಅರಿವು ಮೂಡಿಸಲು ಬಹಳ ಕೆಲಸ ಮಾಡುತ್ತಿದೆ. ಇದರ ಪರಿಣಾಮವಾಗಿ ಅರಿವು ಹೆಚ್ಚಿದೆ ಮತ್ತು ಪ್ರಕರಣಗಳ ತನಿಖೆ ಮತ್ತು ವಿಚಾರಣೆಯೂ ಹೆಚ್ಚಿದೆ. ಬೆಂಗಳೂರಿನ ಶಾಲೆಗಳನ್ನು ಸುರಕ್ಷಿತಗೊಳಿಸಲು ಸಹ ಹೋರಾಡುತ್ತಿದ್ದಾರೆ.

ಅವರ ಆರ್ ಸಿ ಪ್ರತಿಷ್ಠಾನ ಹಲವಾರು ವರ್ಷಗಳ ಕಾಲ ದೃಶ್ಯ ಫೌಂಡೇಷನ್ ಎಂಬ ಪ್ರತಿಷ್ಠಾನವನ್ನು ಬೆಂಬಸಲಿಸಿತ್ತು - ಈ ಸಂಸ್ಥೆ ನಗರದ ನೂರಾರು ಬಡ ಮಕ್ಕಳಿಗೆ ಶಿಕ್ಷಣ ನೀಡಿದೆ.

ಅವರಿಗೆ ನಗರಾದ್ಯಂತ ನಿವಾಸಿ ಕಲ್ಯಾಣ ಸಂಘಗಳ, ಯುವಕರ, ಸೇನಾ ಪಡೆಗಳ, ಮಧ್ಯಮ ವರ್ಗದ ಜನತೆಯ ಭಾರಿ ಬೆಂಬಲವಿದೆ.